INSTAKAS

# “PRAGATI” (ಪ್ರಗತಿ)ಯ 50ನೇ ಸಭೆಯ ಅಧ್ಯಕ್ಷತೆ ವಹಿಸಿದ ಪ್ರಧಾನಿ



**ಇದೀಗ ಸುದ್ದಿಯಲ್ಲಿದೆ:** ಇತ್ತೀಚಿಗೆ, ಪ್ರಧಾನಮಂತ್ರಿಯವರು ‘ಪ್ರಗತಿ’ (“PRAGATI”- Pro-Active Governance And Timely Implementation) ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನ ಸಂವಾದದ 50ನೇ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

## “PRAGATI”- Pro-Active Governance And Timely Implementation (ಪ್ರಗತಿ- ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನ) ಉಪಕ್ರಮದ ಬಗ್ಗೆ:

### ಚಾಲನೆ:

- **2015 ರಲ್ಲಿ ಪ್ರಧಾನ ಮಂತ್ರಿ ಕಾರ್ಯಾಲಯವು (PMO) ಚಾಲನೆ ನೀಡಿದ ತಂತ್ರಜ್ಞಾನ ಚಾಲಿತ ಆಡಳಿತ ಮತ್ತು ಮೇಲ್ವಿಚಾರಣಾ ವೇದಿಕೆಯಾಗಿದೆ.**

### ಗುರಿ:

- ಸಾರ್ವಜನಿಕ ಆಡಳಿತವನ್ನು ಸುಧಾರಿಸುವುದು ಮತ್ತು ಸರ್ಕಾರದ ಕಾರ್ಯಕ್ರಮ ಹಾಗೂ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸುವುದು.



### ಉದ್ದೇಶಗಳು:

- **ಯೋಜನೆಗಳ ಮೇಲ್ವಿಚಾರಣೆ:-**
  - ಅಧಿಕ ಮೌಲ್ಯದ ಮತ್ತು ನಿರ್ಣಾಯಕ ಮೂಲಸೌಕರ್ಯ ಯೋಜನೆಗಳ ಪ್ರಗತಿಯನ್ನು ಪತ್ತೆಹಚ್ಚುವುದು ಹಾಗೂ ವಿಳಂಬ ಅಥವಾ ಅಡೆತಡೆಗಳನ್ನು ನಿವಾರಿಸುವುದು.
- **ಕಾರ್ಯಕ್ರಮಗಳ ಅನುಷ್ಠಾನ:-**
  - ಸರ್ಕಾರದ ಯೋಜನೆಗಳು ಮತ್ತು ಅಭಿಯಾನಗಳ ಸಕಾಲಿಕ ಹಾಗೂ ಸಮರ್ಥ ಜಾರಿಯನ್ನು ಖಚಿತಪಡಿಸಿಕೊಳ್ಳುವುದು.
- **ಕುಂದುಕೊರತೆ ನಿವಾರಣೆ:-**
  - ನಾಗರಿಕರ ದೂರುಗಳಿಗಾಗಿ ಇರುವ **‘ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ’ (CPGRAMS)** ಯಂತಹ ವ್ಯವಸ್ಥೆಗಳೊಂದಿಗೆ ಸಂಯೋಜಿಸುವ ಮೂಲಕ ದೀರ್ಘಕಾಲದ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸುವುದು.

### ಪ್ರಮುಖ ಸಾಧನೆಗಳು:

**94%**

‘ಪ್ರಗತಿ’ ಅಡಿಯಲ್ಲಿ ಈವರೆಗೆ 377 ಯೋಜನೆಗಳನ್ನು ಪರಾಮರ್ಶಿಸಲಾಗಿದೆ. ಈ ಯೋಜನೆಗಳಲ್ಲಿ ಗುರುತಿಸಲಾದ 3,162 ಸಮಸ್ಯೆಗಳ ಪೈಕಿ 2,958 ಸಮಸ್ಯೆಗಳನ್ನು, ಅಂದರೆ ಸುಮಾರು **94% ನಷ್ಟು ಸಮಸ್ಯೆಗಳನ್ನು ಪರಿಹರಿಸಲಾಗಿದೆ.**

ದಶಕಗಳಿಂದ ಸ್ಥಗಿತಗೊಂಡಿದ್ದ ಹಲವಾರು ಯೋಜನೆಗಳು ‘ಪ್ರಗತಿ’ ವೇದಿಕೆಯ ಅಡಿಯಲ್ಲಿ ಕೈಗೆತ್ತಿಕೊಂಡ ನಂತರ ಪೂರ್ಣಗೊಂಡಿವೆ ಅಥವಾ ಅವುಗಳ ಅಡೆತಡೆಗಳನ್ನು ನಿರ್ಣಾಯಕವಾಗಿ ನಿವಾರಿಸಲಾಗಿದೆ.